## ಕರ್ನಾಟಕ ಸರ್ಕಾರದ ನಡವಳಿಗಳು

*ವಿಷಯ:* 14 ನೇ ಹಣಕಾಸು ಯೋಜನೆಯಡಿ ಕೋಲಾರ ತಾಲ್ಲೂಕು ನರಸಾಪುರ ಗ್ರಾಮ ಪಂಚಾಯಿತಿಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಶ್ರೀ ಹೆಚ್.ರಂಗನಾಥ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಇತರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ-1 ರವರಿಗೆ ವಹಿಸುವ ಬಗ್ಗೆ ಆದೇಶ.

*ಓದಲಾಗಿದೆ:*

| | |
|---|---|
| *1.* | ನಿಬಂಧಕರು ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರ ಅ.ಸ.ಪ.ಸಂಖ್ಯೆ:ಕಂಪ್ಲೇಟ್/ಉಪಲೋಕ್/ಬಿಡಿ/1760/2018/ಡಿಆರ್‌ಇ-4, ದಿನಾಂಕ:04.02.2020 |
| *2.* | ಮಾನ್ಯ ಉಪ ಲೋಕಾಯುಕ್ತರವರ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ವರದಿ ಸಂಖ್ಯೆ: ಕಂಪ್ಲೇಟ್/ಉಪಲೋಕ್/ಬಿಡಿ/1760/2018/ ಉನಿವಿ-4, ದಿನಾಂಕ:29.01.2020 |

***ಪ್ರಸ್ತಾವನೆ:-***

ನಿಬಂಧಕರು ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ರವರು ಮೇಲೆ ಓದಲಾದ ಕ್ರಮ ಸಂಖ್ಯೆ(1) ರ ದಿನಾಂಕ:04.02.2020 ರ ಅರೆ ಸರ್ಕಾರಿ ಪತ್ರದ ಜೊತೆ ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ಮಾನ್ಯ ಉಪ ಲೋಕಾಯುಕ್ತ-1 ರವರ ದಿನಾಂಕ:29.01.2020 ರ ಲೋಕಾಯುಕ್ತ ಕಾಯ್ದೆಯ ಕಲಂ 12(3)ರ ವರದಿ ಹಾಗೂ ಇತರೆ ದಾಖಲೆಗಳನ್ನು ಲಗತ್ತಿಸಿ, ಸರ್ಕಾರಕ್ಕೆ ಕಳುಹಿಸಿ ಮಾನ್ಯ ಉಪ ಲೋಕಾಯುಕ್ತ-1 ರವರ ವರದಿಯನುಸಾರ ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಶ್ರೀ ವಿ.ರಾಮಕೃಷ್ಣ ಇವರು ಸಲ್ಲಿಸಿದ್ದ ದೂರಿನಲ್ಲಿ ಕೋಲಾರ ತಾಲ್ಲೂಕು ನರಸಾಪುರ ಗ್ರಾಮ ಪಂಚಾಯತ್‌ಗೆ 14ನೇ ಹಣಕಾಸು ಯೋಜನೆಯಡಿ ದಿನಾಂಕ:01.01.2016 ರಿಂದ 30.12.2017 ರವೆಗೆ ರೂ.52,27,571/- ಗಳು ಮಂಜೂರಾಗಿದ್ದು, ಕಾಮಗಾರಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನೀಡಿರುವುದಿಲ್ಲವೆಂದು ಆರೋಪಿಸಿದ್ದರ ಕುರಿತು ಮಾನ್ಯ ಉಪಲೋಕಾಯುಕ್ತರು ತನಿಖೆ ಕೈಗೊಂಡಿದ್ದು, ದಿನಾಂಕ:01.01.2016 ರಿಂದ 30.12.2017 ರ ಅವಧಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಶ್ರೀ ಬಿ.ಆರ್.ರಮೇಶ್ ಬಾಬು, ಪಂಚಾಯತ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಶ್ರೀಮತಿ ಶೈಲಾ ರಾಜ್, ಹಾಗೂ ಕಾಮಗಾರಿಗಳನ್ನು ನಿರ್ವಹಿಸಿದ ಕಿರಿಯ ಇಂಜಿನಿಯರ್‌ಗಳಾದ ಶ್ರೀ ವಿ.ಶ್ರೀನಿವಾಸ್, ಶ್ರೀ ವಿ.ನಾಗರಾಜ, ಶ್ರೀ ಅಂಜಪ್ಪ, ಶ್ರೀಮತಿ ಕೆ.ಸುನೀತಾ ಹಾಗೂ ಸಹಾಯಕ ಕಾರ್ಯಪಾಲಕ ಇಂಜಿಯರ್‌ಗಳಾದ ಶ್ರೀ ಹೆಚ್.ರಂಗನಾಥ್, ಶ್ರೀ ಸಿ.ಬಿ.ವೆಂಕಟೇಗೌಡ ಮತ್ತು ಶ್ರೀ ಎಂ.ಮಂಜುನಾಥ ಇವರುಗಳಿಗೆ ಆಕ್ಷೇಪಣೆಗಳನ್ನು ಕೋರಲಾಗಿ, ಈ ಪೈಕಿ ಶ್ರೀ ಬಿ.ಆರ್.ರಮೇಶ್ ಬಾಬು, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಇವರು ವಿವರಣೆ ನೀಡಿದ್ದು, ತಾವು ದಿನಾಂಕ:03.11.2017 ರಂದು ಸಂಪೂರ್ಣ ಪ್ರಭಾರವನ್ನು ಶ್ರೀ ಕೆ.ಮಹೇಶ್ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಇವರಿಗೆ ಹಸ್ತಾಂತರಿಸಿರುವುದಾಗಿ ತಿಳಿಸಿರುತ್ತಾರೆ. ಉಳಿದವರು ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ದೂರಿಗೆ ಸಂಬಂಧಿಸಿದಂತೆ ಕಡತ ಮತ್ತು ದಾಖಲೆಗಳನ್ನು ಪರಿಶೀಲಿಸಿ ಈ ಕೆಳಕಂಡ ಅಂಶಗಳನ್ನು ಕಲಂ 12(3) ರ ವರದಿಯಲ್ಲಿ ಉಲ್ಲೇಖಿಸಿರುತ್ತಾರೆ:-

1. ಕೆಲವು ಕಾಮಗಾರಿಗಳನ್ನು ಗುತ್ತಿಗೆದಾರರುಗಳಿಗೆ ತುಂಡು ಗುತ್ತಿಗೆ ಆಧಾರದ ಮೇಲೆ ಕರಾರು ಪತ್ರಗಳಡಿ ವಹಿಸಿದೆ. ಸದರಿ ಕರಾರು ಪತ್ರಕ್ಕೆ ಕಿರಿಯ ಅಭಿಯಂತರರು ಸಹಿ ಮಾಡಿದ್ದಾರೆ. ಕರ್ನಾಟಕ

ಪಂ.ರಾಜ್ (ಗ್ರಾಮ ಪಂಚಾಯಿತಿಗಳ ಲೆಕ್ಕಪತ್ರಗಳು & ಬಜೆಟ್) ನಿಯಮಗಳು, 2006 ರ ನಿಯಮ 83 ರನ್ವಯ ನಮೂನೆ-36 ರಲ್ಲಿ ಪಂಚಾಯತ್ ಕಾರ್ಯದರ್ಶಿ/ಅಭಿವೃದ್ಧಿ ಅಧಿಕಾರಿ ಕಾರ್ಯಾದೇಶವನ್ನು ನೀಡಿದ ದಾಖಲೆಗಳಿಲ್ಲ. ಸದರಿ ನಿಯಮದನ್ವಯ ಪಂಚಾಯತ್ ಕಾರ್ಯದರ್ಶಿ/ಅಭಿವೃದ್ಧಿ ಅಧಿಕಾರಿ ಕಾರ್ಯಾದೇಶ ನೀಡದೇ ಪಂಚಾಯತ್ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಯನ್ನು ಪ್ರಾರಂಭಿಸತಕ್ಕದ್ದಲ್ಲ.

2. ಕೆಲವು ಕಾಮಗಾರಿಗಳ ಅಂದಾಜು ಮೊತ್ತ ರೂ.1 ಲಕ್ಷಗಳು ಮೀರಿದ್ದು, ಕೆಟಿಪಿಪಿ ಕಾಯ್ದೆ ಅನ್ವಯ ಸದರಿ ಕಾಮಗಾರಿಗಳಿಗೆ ಟೆಂಡರ್ ಕರೆದು ನಿಯಮಾನುಸಾರ ಅರ್ಹ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಬೇಕು. ಕರ್ನಾಟಕ ಪಂ.ರಾಜ್(ಗ್ರಾಮ ಪಂಚಾಯಿತಿಗಳ ಲೆಕ್ಕಪತ್ರಗಳು & ಬಜೆಟ್) ನಿಯಮಗಳು, 2006 ರ ನಿಯಮ 81 ರಲ್ಲಿಯೂ ಈ ವಿಷಯವನ್ನು ಪ್ರಸ್ತಾಪಿಸಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಕರೆದ ದಾಖಲೆಗಳಿಲ್ಲ, ಸದರಿ ಕಾಮಗಾರಿಗಳನ್ನು ತುಂಡು ಗುತ್ತಿಗೆ ಕರಾರಿನಡಿ ಗುತ್ತಿಗೆದಾರರುಗಳಿಗೆ ನಿಯಮಬಾಹಿರವಾಗಿ ವಹಿಸಿದ್ದಾರೆ. ನಿಯಮ 85 ರಲ್ಲಿ ಹೇಳಿದಂತೆ ನಮೂನೆ-37 ರಲ್ಲಿ ನಿರ್ವಹಿಸಬೇಕಾದ ಅಳತೆ ವಹಿ ಇಲ್ಲ. ಸದರಿ ಕಾಮಗಾರಿಗಳ ಅಂದಾಜು ರೂ.25,000/- ಗಳು ಮೀರಿದ್ದು, ರೂ.4 ಲಕ್ಷಕ್ಕಿಂತ ಒಳಗಡೆ ಇರುವುದರಿಂದ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರು ಕಾಮಗಾರಿಗಳ ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ. ನಿಯಮ 85(6) ರನ್ವಯ ಗುತ್ತಿಗೆದಾರರುಗಳಿಗೆ ಹಣ ಸಂದಾಯ ಮಾಡುವ ಸಂದರ್ಭದಲ್ಲಿ ಅಳತೆ ಪುಸ್ತಕದ ಮೇಲೆ "ಪೇಡ್ & ಕ್ಯಾನ್ಸಲ್ಡ್" ಮೊಹರನ್ನು ಹಾಕಬೇಕು. ಅಳತೆ ಪುಸ್ತಕದ ಪ್ರತಿಯಲ್ಲಿ ಸದರಿ ಮೊಹರು ಕಂಡುಬಂದಿರುವುದಿಲ್ಲ.

3. ಶ್ರೀ ಚೌಡೇಶ್ವರಿ ಇಂಜಿನಿಯರಿಂಗ್ ವರ್ಕ್ಸ್‌ರವರ ಬಿಲ್ಲುಗಳ ಪಾವತಿ ಕುರಿತು 6 ನಗದು ರಸೀದಿಗಳು ಮಾತ್ರ ಲಭ್ಯವಿದ್ದು, ಸದರಿ ರಸೀದಿಗಳು ಮೋಟಾರ್ ರಿವೈಂಡಿಂಗ್/ರಿಪೇರಿ ಇತ್ಯಾದಿ ಕೆಲಸಗಳಿಗೆ ಸಂಬಂಧಪಟ್ಟಿದೆ. ಸದರಿ ಖರ್ಚಿಗೆ ಸಂಬಂಧಿಸಿದಂತೆ ಆಹ್ವಾನಿಸಿದ ದರ ಪಟ್ಟಿ, ಖರೀದಿ ಬಿಲ್ಲು, ರಸೀದಿ, ವೋಚರ್ ಮುಂತಾದ ದಾಖಲೆಗಳಿಲ್ಲ. ಕೆಎಫ್‌ಸಿ ಪರಿಚ್ಛೇದ 17 ರ ಪ್ರಕಾರ ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮಾರುಕಟ್ಟೆಯಲ್ಲಿ ಖರೀದಿಸುವ ಸಾಧಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55(49)(ಎ) ರನ್ವಯ ರೂ.5000/- ಮೀರಿದ ರೂ.10,000/- ವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ಕೊಟೇಷನ್ ಕರೆಯುವ ಮೂಲಕ ಮಾಡತಕ್ಕದು. ಕೆಎಫ್‌ಸಿ ಪರಿಚ್ಛೇದ 57 ರ ಪ್ರಕಾರ ಪ್ರತಿಯೊಂದು ಖರ್ಚಿನ ಬಗ್ಗೆ ವೋಚರ್‌ಗಳು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರಬೇಕು. ಆದರೆ ಮೇಲೆ ಹೇಳಿದ 6 ನಗದು ರಸೀದಿಗಳನ್ನು ಹೊರತುಪಡಿಸಿ, ಸದರಿ ಖರ್ಚುಗಳಿಗೆ ಸಂಬಂಧಿಸಿದ ಯಾವುದೇ ದಾಖಲೆಗಳಿಲ್ಲ. ಕಾರಣ ಸದರಿ ಪಾವತಿ ನಿಯಮಬಾಹಿರವಾಗಿದೆ.

ಮೇಲಿನ ಕಾಮಗಾರಿಗಳ ಕಡತದಲ್ಲಿನ ಸಂಗತಿಗಳು ಮತ್ತು ದಾಖಲಾತಿಗಳಿಂದ ಈ ಕೆಳಕಂಡ ಅಧಿಕಾರಿ/ನೌಕರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡುಬಂದಿರುತ್ತದೆಯೆಂದು, ಹಾಗಾಗಿ ಇವರುಗಳ ವಿರುದ್ಧ ವಿವರವಾದ ಇಲಾಖೆ ವಿಚಾರಣೆಗೆ ತಮ್ಮ ಸಂಸ್ಥೆಗೆ ವಹಿಸುವಂತೆ ಮಾನ್ಯ ಉಪಲೋಕಾಯುಕ್ತರು ಕೋರಿರುತ್ತಾರೆ.

1. ಶ್ರೀ ಬಿ.ಆರ್.ರಮೇಶ್ ಬಾಬು, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನರಸಾಪುರ ಗ್ರಾ.ಪಂ, ಕೋಲಾರ ತಾಲ್ಲೂಕು
2. ಶ್ರೀ ವಿ.ಶ್ರೀನಿವಾಸ್, ಕಿ.ಇಂ, ಪಂ.ರಾ.ಇಂ ಉಪವಿಭಾಗ, ಕೋಲಾರ
3. ಶ್ರೀ ವಿ.ನಾಗರಾಜ, ಕಿ.ಇಂ, ಪಂ.ರಾ.ಇಂ ಉಪವಿಭಾಗ, ಕೋಲಾರ

4. ಶ್ರೀ ಅಂಜಪ್ಪ, ಕಿ.ಇಂ, ಪಂ.ರಾ.ಇಂ ಉಪವಿಭಾಗ, ಕೋಲಾರ
5. ಶ್ರೀಮತಿ ಕೆ.ಸುನೀತಾ, ಕಿ.ಇಂ, ಪಂ.ರಾ.ಇಂ ಉಪವಿಭಾಗ, ಕೋಲಾರ
6. ಶ್ರೀ ಹೆಚ್.ರಂಗನಾಥ್, ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಕೋಲಾರ
7. ಶ್ರೀ ಸಿ.ಬಿ.ವೆಂಕಟೇಗೌಡ, ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಕೋಲಾರ
8. ಶ್ರೀ ಎಂ.ಮಂಜುನಾಥ, ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಕೋಲಾರ

ಆರೋಪಿತರ ಪೈಕಿ ಶ್ರೀ ಅಂಜಪ್ಪ, ಕಿ.ಇಂ., ಇವರು ದಿನಾಂಕ:31.5.2018 ರಂದು ಸೇವೆಯಿಂದ ವಯೋ ನಿವೃತ್ತಿ ಹೊಂದಿರುವುದರಿಂದ ಸದರಿಯವರ ವಿರುದ್ಧ ಇಲಾಖೆ ವಿಚಾರಣೆ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ ನಿಯಮ 214 (2)(ಬಿ)(i) ರನ್ವಯ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ದಾಖಲೆಗಳನ್ನು ಪರಿಶೀಲಿಸಿದ್ದು, ಕೋಲಾರ ತಾಲ್ಲೂಕಿನ ನರಸಾಪುರ ಗ್ರಾಮ ಪಂಚಾಯಿತಿಗೆ 14 ನೇ ಹಣಕಾಸು ಯೋಜನೆಯಡಿ ದಿನಾಂಕ:01.01.2016 ರಿಂದ 31.12.2017 ರವರೆಗೆ ರೂ.52,27,571/- ಗಳು ಜಮಾ ಆಗಿದ್ದು, ಈ ಮೊತ್ತದ ಪೈಕಿ ರೂ.20,44,650/-ಗಳನ್ನು ಖರ್ಚು ಮಾಡಲಾಗಿದ್ದು, ಈ ರೀತಿ ಖರ್ಚು ಮಾಡಿರುವ ಮೊತ್ತಕ್ಕೆ ಸಮರ್ಪಕವಾಗಿ ಕಾಮಗಾರಿಗಳ ಕಾರ್ಯಾದೇಶ ನೀಡದೇ ಇರುವುದು, ಕಾಮಗಾರಿ ವಿವರಗಳನ್ನು ಅಳತೆ ಪುಸ್ತಕದಲ್ಲಿ ನಮೂದಿಸದೇ ಇರುವುದು, ಕಾಮಗಾರಿ ಮುಕ್ತಾಯದ ವಿವರಗಳನ್ನು ದಾಖಲಿಸದೇ ಇರುವುದು, ಸಾಮಗ್ರಿಗಳನ್ನು ಮಾರುಕಟ್ಟೆಯಲ್ಲಿ ಕೊಟೇಶನ್ ಕರೆದು ಖರೀದಿಸದೇ ಇರುವುದು, ಖರ್ಚಿನ ವಿವರಗಳ ಬಗ್ಗೆ ವೋಚರ್‌ಗಳನ್ನು ಮತ್ತು ದಾಖಲೆಗಳನ್ನು ನಿರ್ವಹಿಸದೇ ಇರುವುದು ಕಂಡುಬಂದಿರುತ್ತದೆ. ಆಪಾದಿತರು ಸರ್ಕಾರಿ ನೌಕರರಾಗಿದ್ದು ತಮ್ಮ ಕರ್ತವ್ಯಪಾಲನೆಯಲ್ಲಿ ಪೂರ್ಣ ಪ್ರಮಾಣದ ಪ್ರಾಮಾಣಿಕತೆ/ಕರ್ತವ್ಯ ನಿಷ್ಠೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ವರ್ತಿಸಿರುವುದು ಕಂಡು ಬಂದಿರುವುದರಿಂದ ಇವರುಗಳ ವಿರುದ್ಧದ ಆರೋಪಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ)ನಿಯಮಗಳು, 1957 ರ ನಿಯಮ 11 ರಂತೆ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲು ಸರ್ಕಾರವು ನಿರ್ಧರಿಸಿದೆ. ಆದ್ದರಿಂದ ಈ ಆದೇಶ.

**<u>ಆದೇಶ ಸಂಖ್ಯೆ:ಗ್ರಾಅಪ 09 ಇಎನ್‌ಕ್ಯೂ 20, ಬೆಂಗಳೂರು, ದಿನಾಂಕ:01.04.2020</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಅಂಜಪ್ಪ, ಕಿರಿಯ ಇಂಜಿನಿಯರ್ ಇವರು ದಿನಾಂಕ:31.05.2018 ರಂದು ಸೇವೆಯಿಂದ ವಯೋ ನಿವೃತ್ತಿ ಹೊಂದಿರುವುದರಿಂದ ಸದರಿಯವರ ವಿರುದ್ಧ ಇಲಾಖೆ ವಿಚಾರಣೆ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ ನಿಯಮ 214 (2)(ಬಿ)(i) ರನ್ವಯ ಮಂಜೂರಾತಿ ನೀಡಿದೆ. ಶ್ರೀ ಅಂಜಪ್ಪ, ಕಿ.ಇಂ ಇವರನ್ನು ಒಳಗೊಂಡಂತೆ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ 1957ರ ನಿಯಮ 11 ರಂತೆ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ-14(ಎ) ರಂತೆ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

1. ಶ್ರೀ ಬಿ.ಆರ್.ರಮೇಶ್ ಬಾಬು, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನರಸಾಪುರ ಗ್ರಾ.ಪಂ, ಕೋಲಾರ ತಾಲ್ಲೂಕು
2. ಶ್ರೀ ವಿ.ಶ್ರೀನಿವಾಸ್, ಕಿ.ಇಂ, ಪಂ.ರಾ.ಇಂ ಉಪವಿಭಾಗ, ಕೋಲಾರ

3. ಶ್ರೀ ವಿ.ನಾಗರಾಜ, ಕಿ.ಇಂ, ಪಂ.ರಾ.ಇಂ ಉಪವಿಭಾಗ, ಕೋಲಾರ
4. ಶ್ರೀಮತಿ ಕೆ.ಸುನೀತಾ, ಕಿ.ಇಂ, ಪಂ.ರಾ.ಇಂ ಉಪವಿಭಾಗ, ಕೋಲಾರ
5. ಶ್ರೀ ಹೆಚ್.ರಂಗನಾಥ್, ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಕೋಲಾರ
6. ಶ್ರೀ ಸಿ.ಬಿ.ವೆಂಕಟೇಗೌಡ, ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಕೋಲಾರ
7. ಶ್ರೀ ಎಂ.ಮಂಜುನಾಥ, ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಕೋಲಾರ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

01/04/2020
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಮಾನ್ಯ ಉಪಲೋಕಾಯುಕ್ತರು-2, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
8. ಸಂಬಂಧಿಸಿದ ಅಧಿಕಾರಿ/ನೌಕರರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ ರವರ ಮುಖಾಂತರ)
9. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
10. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಉಪ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
11. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.